# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 640/2016 ಸಿಡಬ್ಲ್ಯೂ: 7 ಪಿಡಬ್ಲ್ಯೂ: 5

ಪ್ರಮಾಣವಚನ ಬೋಧಿಸಲಾಯಿತು ದಿಃ 15-04-2025

ಹೆಸರು : ಶಿವರಾಯ

ತಂದೆ ಹೆಸರು : ಮಲ್ಲಪ್ಪ

ವಯಸ್ಸು : 27 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ತೇಲಕೂರ್, ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ-1 ನನ್ನ ಅಣ್ಣ. ಚಾಸಾ-4 ನನ್ನ ತಾಯಿ. ಚಾಸಾ-6 ನನ್ನ ತಂದೆ. ಚಾಸಾ-5 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು.

ನಮಗೂ ಮತ್ತು ಆರೋಪಿತರಿಗೂ ಸುಮಾರು 15 ವರ್ಷಗಳಿಂದ ಹೊಲದಲ್ಲಿ ಪಾಲು ವಿಚಾರದಲ್ಲಿ ಜಗಳವಿರುತ್ತದೆ. ದಿನಾಂಕ 09-03-2016ರಂದು ಬೆಳಗ್ಗೆ ನಾನು ಮತ್ತು ಚಾಸಾ-1, 4 ಮತ್ತು 6ರವರು ಮನೆಯಲ್ಲಿ ಮಾತನಾಡುತ್ತಾ ಇರುವಾಗ ಆರೋಪಿತರೆಲ್ಲರೂ ನಮ್ಮ ಮನೆಯ ಎದುರುಗಡೆ ನಿಂತು ರಂಡಿ ಮಕ್ಕಳೇ, ಬೋಸಡಿ ಮಕ್ಕಳೆ ನಿಮಗೆ ಸೋಕ್ಕು ಬಹಳ ಬಂದಿದ್ದೆ ಎಂದು ಬೈಯುತ್ತಿದ್ದರು. ಆಗ ನಾವು ನಮ್ಮ ಮನೆಯಲ್ಲಿರುವ ಗೊಡೆಯ ಮೇಲೆ ಕಟ್ಟಿಗೆ ಇಟ್ಟಿದ್ದು ಅದಕ್ಕೆ ಆರೋಪಿತರು ಅಲ್ಲಿ ಏಕೆ ಕಟ್ಟಿಗೆ ಇಟ್ಟಿದ್ದಿರಿ ಎಂದು ಹೇಳಿ ಜಗಳ ತಗೆದರು. ಆಗ ಚಾಸಾ-1ರವರು ವಿನಾಕಾರಣ ಏಕೆ ಬೈಯುತ್ತಿದ್ದಿರಾ ನಮ್ಮ ಗೊಡೆಯ ಮೇಲೆ ಇಟ್ಟಿದ್ದೇವು ಎಂದು ಹೇಳಿದಾಗ 2ನೇ ಆರೋಪಿತನು ಅಲ್ಲಿ ಬಿದ್ದಿರುವ ಕಟ್ಟಿಗೆಯನ್ನು ತೆಗೆದುಕೊಂಡು ಚಾಸ-1ರವರ ತಲೆಗೆ ಹೋಡೆದರು. ಆಗ 1ನೇ ಆರೋಪಿತನು ಕಲ್ಲನ್ನು ತೆಗೆದುಕೊಂಡು ಚಾಸಾ-1ರವರ ಬೆನ್ನಿಗೆ ಹೊಡೆದನು. 3ನೇ ಆರೋಪಿತನು ಕೈಯಿಂದ ಚಾಸಾ-1ರವರಿಗೆ ಹೊಡೆಬಡೆ ಮಾಡುತ್ತಿದ್ದನ್ನು. ಅಲ್ಲಿರುವ 4 ಮತ್ತು 5ನೇ ಆರೋಪಿತರು ರಂಡಿ ಮಕ್ಕಳೇ ಇವರದು ಬಹಳ ಆಗಿದೆ ಬಿಡಬಾರದು ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಆಗ ನಾವು ಜಗಳ ಬಿಡಿಸಲು ಹೋದಾಗ 3ನೇ ಆರೋಪಿತನು ನನಗೆ ಹೊಡೆಬಡೆ ಮಾಡಿದನು. ಅದೇ ರೀತಿ 1ನೇ ಆರೋಪಿತನು ಚಾಸಾ-6ರವರಿಗೆ ಕೈಯಿಂದ ಹೊಡೆಬಡೆ ಮಾಡಿದನು. 4 ಮತ್ತು 5ನೇ ಆರೋಪಿತರು ಚಾಸಾ-4ರವರ ಕೂದಲು ಹಿಡಿದು ಎಳೆದಾಡಿ ಹೊಡೆದಿರುತ್ತಾರೆ. ಅಲ್ಲಿ ಅಕ್ಕಪಕ್ಕದಲ್ಲಿರುವ ಚಾಸಾ-5 ಮತ್ತು ಇನ್ನಿತರರು ಬಂದು ಜಗಳ ಬಿಡಿಸಿರುತ್ತಾರೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಗೆ ಒಂದು ಬಡಿಗೆ ಮತ್ತು ಕಲ್ಲನ್ನು ತೋರಿಸಲಾಗಿ ಸಾಕ್ಷಿಯೂ ಇದೆ ಬಡಿಗೆ ಮತ್ತು ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ನುಡಿದಿರುತ್ತಾರೆ.

**ವಾಟೀ ಸವಾಲನ್ನು 11.30 ಗಂಟೆವರೆಗೆ ಮುಂದೂಡಲಾಗಿದೆ.**

**ವಾಟೀಸವಾಲುಃ ಆರೋಪಿ ಪರ ಶ್ರೀ RI ವಕೀಲರಿಂದ:**

ನಾನು ಡಿಗ್ರಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮುತ್ಯಾನ ಹೆಸರು ಬಸಪ್ಪ. ಅವರಿಗೆ 4 ಜನ ಮಕ್ಕಳು ಎಂದರೆ ಸರಿ. ಅವರ ಹೆಸರು ಗುಂಡಮ್ಮ, ರತ್ನಮ್ಮ, ಮಲ್ಲಪ್ಪ ಮತ್ತು ಸಾಬಣ್ಣ ಎಂದರೆ ಸರಿ. ನಮ್ಮ ಹಿರಿಯರ 4 ಎಕರೆ ಆಸ್ತಿ ಇತ್ತು ಎಂದರೆ ಸರಿ. ಸದರಿ ಆಸ್ತಿ ಸಂಬಂಧಪಟ್ಟಂತೆ ಸನ್ 2009ರಲ್ಲಿ ಗುಂಡಮ್ಮರವರು ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಅದರಲ್ಲಿ ಎಲ್ಲರಿಗೂ ಒಂದೊಂದು ಎಕರೆ ಬಂದಿದ್ದೆ ಎಂದರೆ ಸರಿ. ಗುಂಡಮ್ಮರವರಿಗೆ ಮಕ್ಕಳು ಇಲ್ಲ ಎಂದರೆ ಸರಿ. ಗುಂಡಮ್ಮ ಇವರು ಸಾಬಣ್ಣಯೊಂದಿಗೆ ವಾಸವಿದ್ದರಿಂದ ಅವರ ಪಾಲಿಗೆ ಬಂದಂತ ಆಸ್ತಿ ಸಾಬಣ್ಣರವರಿಗೆ ಕೊಟ್ಟಿದ್ದರು ಎಂದರೆ ಸರಿ. ಇದನ್ನು ಸಹಿಸಲಾರದೇ ನಮ್ಮ ಎಲ್ಲಾ ಕುಟುಂಬದರೂ ಸೇರಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಒಂದು ವೇಳೆ ನಾವು ಪ್ರಕರಣ ದಾಖಲಿಸಿದಲ್ಲಿ ಆರೋಪಿತರು ಜಮೀನು ಬಿಡುತ್ತಾರೆ ಎಂದು ಉದ್ದೇದಿಂದ ಸುಳ್ಳು ಪ್ರಕರಣ ದಾಖಲಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಮಗೂ ಮತ್ತು ಆರೋಪಿತರಿಗೂ ಸುಮಾರು 15 ವರ್ಷಗಳಿಂದ ಹೊಲದಲ್ಲಿ ಪಾಲು ವಿಚಾರದಲ್ಲಿ ಜಗಳವಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿನಾಂಕ 09-03-2016ರಂದು ಬೆಳಗ್ಗೆ ನಾನು ಮತ್ತು ಚಾಸಾ-1, 4 ಮತ್ತು 6ರವರು ಮನೆಯಲ್ಲಿ ಮಾತನಾಡುತ್ತಾ ಇರುವಾಗ ಆರೋಪಿತರೆಲ್ಲರೂ ನಮ್ಮ ಮನೆಯ ಎದುರುಗಡೆ ನಿಂತು ರಂಡಿ ಮಕ್ಕಳೇ, ಬೋಸಡಿ ಮಕ್ಕಳೆ ನಿಮಗೆ ಸೊಕ್ಕು ಬಹಳ ಬಂದಿದ್ದೆ ಎಂದು ಬೈಯುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾವು ನಮ್ಮ ಮನೆಯಲ್ಲಿರುವ ಗೊಡೆಯ ಮೇಲೆ ಕಟ್ಟಿಗೆ ಇಟ್ಟಿದ್ದು ಅದಕ್ಕೆ ಆರೋಪಿತರು ಅಲ್ಲಿ ಏಕೆ ಕಟ್ಟಿಗೆ ಇಟ್ಟಿದ್ದಿರಿ ಎಂದು ಹೇಳಿ ಜಗಳ ತಗೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ಚಾಸಾ-1ರವರು ವಿನಾಕಾರಣ ಏಕೆ ಬೈಯುತ್ತಿದ್ದಿರಾ ನಮ್ಮ ಗೊಡೆಯ ಮೇಲೆ ಇಟ್ಟಿದ್ದೇವು ಎಂದು ಹೇಳಿದಾಗ 2ನೇ ಆರೋಪಿತನು ಅಲ್ಲಿ ಬಿದ್ದಿರುವ ಕಟ್ಟಿಗೆಯನ್ನು ತೆಗೆದುಕೊಂಡು ಚಾಸ-1ರವರ ತಲೆಗೆ ಹೊಡೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ 1ನೇ ಆರೋಪಿತನು ಕಲ್ಲನ್ನು ತೆಗೆದುಕೊಂಡು ಚಾಸಾ-1ರವರ ಬೆನ್ನಿಗೆ ಹೊಡೆದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. 3ನೇ ಆರೋಪಿತನು ಕೈಯಿಂದ ಚಾಸಾ-1ರವರಿಗೆ ಹೊಡೆಬಡೆ ಮಾಡುತ್ತಿದ್ದನ್ನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅಲ್ಲಿರುವ 4 ಮತ್ತು 5ನೇ ಆರೋಪಿತರು ರಂಡಿ ಮಕ್ಕಳೇ ಇವರದು ಬಹಳ ಆಗಿದೆ ಬಿಡಬಾರದು ಎಂದು

ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾವು ಜಗಳ ಬಿಡಿಸಲು ಹೋದಾಗ 3ನೇ ಆರೋಪಿತನು ನನಗೆ ಹೊಡೆಬಡೆ ಮಾಡಿದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ 1ನೇ ಆರೋಪಿತನು ಚಾಸಾ-6ರವರಿಗೆ ಕೈಯಿಂದ ಹೊಡೆಬಡೆ ಮಾಡಿದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. 4 ಮತ್ತು 5ನೇ ಆರೋಪಿತರು ಚಾಸಾ-4ರವರ ಕೂದಲು ಹಿಡಿದು ಎಳೆದಾಡಿ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅಲ್ಲಿ ಅಕ್ಕಪಕ್ಕದಲ್ಲಿರುವ ಚಾಸಾ-5 ಮತ್ತು ಇನ್ನಿತರರು ಬಂದು ಜಗಳ ಬಿಡಿಸಿರುತ್ತಾರೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ಒಂದು ಬಡಿಗೆ ಮತ್ತು ಕಲ್ಲನ್ನು ತೋರಿಸಲಾಗಿ ಸಾಕ್ಷಿಯೂ ಇದೆ ಬಡಿಗೆ ಮತ್ತು ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ನುಡಿದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**